ರಸ್ತೆಗಳಿಲ್ಲ, 12 ಗ್ರಾಮಗಳಿಗೆ ಬಸ್ ಹೋಗುವುದಿಲ್ಲ. ಚನ್ನಕೇರಿ, ಬ್ಯಾಡಹಟ್ಟಿ, ಸಿದ್ದೇವಾಡಿ, ಕೃಷ್ಣೇವಾಡಿ, ಬೋಮ್ಮನಾಳ್, ಕೋತ್ತಿವಾಡಿ, ಕಲೂತಿ, ನಿಸ್ಕರದಟ್ಟಿ, ಚಕ್ಕರದಟ್ಟಿ, ಮುಂತಾದ 12 ಗ್ರಾಮಗಳಿಗೆ ರಸ್ತೆಗಳು ಇಲ್ಲದೆ ಇರುವುದರಿಂದ ಬಸ್ ಹೋಗುವುದಿಲ್ಲ. ಮಹಾರಾಷ್ಟ್ರ ಗಡಿಭಾಗದಲ್ಲಿ ಕೆಲವೊಂದು ಕಡೆ ಕೇವಲ ಐದನೇ ತರಗತಿಯವರೆಗೆ ಮಾತ್ರ ಪ್ರಾಥಮಿಕ ಶಾಲೆಗಳಿವೆ, ಪೂರ್ಣ ಪ್ರಮಾಣದಲ್ಲಿ ಪ್ರಾಥಮಿಕ ಶಾಲೆಗಳಿಲ್ಲ. ಆ ಭಾಗದ ಜನರು ತಮ್ಮ ಮಕ್ಕಳು ಮಾಧ್ಯಮಿಕ ಶಾಲಾ ಶಿಕ್ಷಣ ಹೊಂದಲು ಮಹಾರಾಷ್ಟ್ರದಲ್ಲಿರುವ ಶಾಲೆಗಳನ್ನೇ ಅವಲಂಬಿಸಿರುವ ದುಸ್ಥಿತಿ ಒದಗಿ ಬಂದಿದೆ. ಆ ಭಾಗದ ವಿದ್ಯಾರ್ಥಿಗಳು ಇವತ್ತು ಉಚ್ಚ ಶಿಕ್ಷಣಕ್ಕಾಗಿ ಮಹಾರಾಷ್ಟ್ರಕ್ಕೆ ಹೋದಾಗ ಮಹಾರಾಷ್ಟ್ರದವರು, ನೀವು ಕರ್ನಾಟಕದವರು ನಿಮಗೆ ನಾವು ಯಾವುದೇ ಸವಲತ್ತುಗಳನ್ನ ಕೊಡುವುದಕ್ಕಾಗುವುದಿಲ್ಲ, ಎಂದು ಹೇಳುತ್ತಾರೆ. ಅವರು ಮರಾಠಿಯಲ್ಲಿ ಆ ಭಾಗದ ಜನರು ಕಲಿತಿರುವುದರಿಂದ ನಮ್ಮ ಕರ್ನಾಟಕದಲ್ಲಿ ಅವರಿಗೆ ಯಾವುದೇ ನೌಕರಿಯ ಸವಲತ್ತುಗಳನ್ನು ಕೊಡಲು ಅಸಾಧ್ಯವಾಗಿರುವ ಪರಿಸ್ಥಿತಿ ಅಲ್ಲಿಯ ವಿದ್ಯಾರ್ಥಿಗಳಿಗಿದೆ. ಅಲ್ಲಿ ಪಶು ಚಿಕಿತ್ಸಾ ಕೇಂದ್ರಗಳಲ್ಲಿ, ಆರೋಗ್ಯ ಕೇಂದ್ರಗಳೂ ಇಲ್ಲ. ಅಲ್ಲಿ ಮುಖ್ಯವಾಗಿ ಎಲ್ಲ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕೆಂದು ಎಲ್ಲ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದೆ. ಇದು ನಮ್ಮ ರಾಜ್ಯ ಸರ್ಕಾರಕ್ಕೆ ಅವಮಾನವಾಗುವ ವಿಷಯ. ಇಂಡಿಯನ್ ಎಕ್ಸ್‌ಪ್ರೆಸ್, ಸಂಯುಕ್ತ ಕರ್ನಾಟಕ, ಪ್ರಜಾವಾಣಿ ಹಾಗೂ ವಿಜಯ ಕರ್ನಾಟಕ ಈ ಎಲ್ಲಾ ಪತ್ರಿಕೆಗಳಲ್ಲಿ ಕನ್ನಡ ರಾಜ್ಯೋತ್ಸವ ದಿನದಂದು ವಿವರವಾದ ಲೇಖನ ಬಂದಿತ್ತು. ಅಲ್ಲಿ ಬಸ್ ವ್ಯವಸ್ಥೆ ಆಗಬೇಕು, ಶೈಕ್ಷಣಿಕ ವ್ಯವಸ್ಥೆಗಾಗಿ ಮಾಧ್ಯಮಿಕ ಶಾಲೆಗಳಾಗಬೇಕು. ತೊಗಟನೂರುಗ್ರಾಮದಲ್ಲಿ ಒಂದು ಜೂನಿಯರ್ ಕಾಲೇಜು ಆಗಬೇಕು. ಚಿಕ್ಕ ನೀರಾವರಿಯಲ್ಲಿ ಬರತಕ್ಕಂಥ ವಿಷ್ಣುವಾಡಿ, ಬಳೊಳ್ಳಗೆರೆ, ಅನಂತಪುರ ಗ್ರಾಮಗಳಲ್ಲಿ ಕೆರೆ ನಿರ್ಮಾಣವಾಗಬೇಕು. ಬಳ್ಳಿಗೆರೆ ಗ್ರಾಮದಲ್ಲಿ ಒಂದು ಪ್ರಾಥಮಿಕ ಕೇಂದ್ರವಾಗಬೇಕು. ಇನ್ನಿತರ ಸ್ಥಳಗಳಲ್ಲಿ ರಸ್ತೆ ನಿರ್ಮಾಣವಾಗಬೇಕೆಂದು ಸರ್ಕಾರದವರಲ್ಲಿ ನಾನು ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(iii) ಮಾನ್ಯ ಶಾಸಕರುಗಳಿಗೆ ಗಣಕಯಂತ್ರ ನೀಡುವುದರ ಬಗ್ಗೆ.

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) :— ಮಾನ್ಯ ಅಧ್ಯಕ್ಷರೆ, ಶಾಸಕರಿಗೆ ಗಣಕಯಂತ್ರ ಕೊಡುತ್ತೇವೆಂದು ಹೇಳಿ ಆ ಬಗ್ಗೆ ಟ್ರೈನಿಂಗ್ ಕೂಡ ಕೊಟ್ಟಿರಿ, ನಾವು ಎಲ್ಲರೂ ಟ್ರೈನಿಂಗ್ ಪಡೆದವು. ಇವತ್ತು ಒಂದು ಕಂಡಿಷನ್ ಹೇಳಿದ್ದೀರಿ, ಇದರಲ್ಲಿ ಕೆಲವೊಂದು ಒಪ್ಪಿಕೊಳ್ಳೋಣ, ನಾಲ್ಕು ವರ್ಷಗಳ ನಂತರ ಅದನ್ನು ವಾಪಸ್ ಕೊಡಬೇಕು ಎಂದು ತಾವು ಹೇಳುತ್ತೀರಿ, ಅದನ್ನು ಕೊಡೋಣ ಆದರೆ ನಾಲ್ಕು ವರ್ಷಗಳ ನಂತರ ನಾವು ವಾಪಸ್ ಕೊಡುವ ಗಣಕಯಂತ್ರದ ಕಂಡಿಷನ್ ಹೇಗಿರುತ್ತದೆ?

ಅಧ್ಯಕ್ಷರು :— ಅದು ನಮ್ಮ ಸೃಷ್ಟಿ ಅಲ್ಲ, ಫೈನಾನ್ಸ್ ಮಿನಿಸ್ಟರ್‌ನಿಂದ ಬಂದಿದ್ದು, ನಾವು ಕಳುಹಿಸಿದ್ದೇವೆ.

ಶ್ರೀ ಬಿ.ಬಿ. ಶಿವಪ್ಪ :— ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮೂಲಕ ಸರ್ಕಾರಕ್ಕೆ ಅಪೀಲ್ ಮಾಡುವುದು ಏನೆಂದರೆ ಕಂಡಿಷನ್ ನೀವು ಹಾಕಿರುವುದು ಅದು ಕಂಡಿಷನ್ ಆಗುವುದಿಲ್ಲ. ಏಕೆಂದರೆ, ಗಣಕಯಂತ್ರದ ಆಯಸ್ಸು ಒಂದು ವರ್ಷ. ನಾಲ್ಕು ವರ್ಷವೆಂದರೆ ಅದು ಏನಾಗುತ್ತದೆ ಎಂದು ಅದು ಅವರವರ ಹಣೆಬರಹ. ನಾಲ್ಕು ವರ್ಷಗಳ ನಂತರ ನೀವು ಅದನ್ನು ವಾಪಸ್ ತೆಗೆದುಕೊಳ್ಳುವುದಾದರೆ, ಅದು ಯಾವ ಕಂಡಿಷನ್‌ನಲ್ಲಿದೆ ಆ ಕಂಡಿಷನ್‌ನಲ್ಲೇ ನೀವು ತೆಗೆದುಕೊಳ್ಳಬೇಕು. ಕೊಟ್ಟ ಗಣಕಯಂತ್ರಗಳನ್ನು ವಾಪಸ್ ಕೊಡದೇ ಹೋದರೆ ನಿಮ್ಮ ಪೆನ್‌ಷನ್‌ನಲ್ಲಿ ಹಿಡಿದುಕೊಳ್ಳುತ್ತೇವೆಂದು ಹೇಳಿದ್ದೀರಿ. ಈ ಸ್ಕೀಮನ್ನು ತಾವು ಮಾಡಿದ್ದೀರಿ, ಅತ್ಯಂತ ಉತ್ತಮವಾದ ಸ್ಕೀಮ್. ಅನೇಕ ಶಾಸಕರಿಗೆ ಅದರಲ್ಲಿ ತರಬೇತಿ ಕೂಡ ಕೊಟ್ಟಿದ್ದೀರಿ. ಇಂತಹ ಕಾನೂನನ್ನು ಮತ್ತು ಗಣಕಯಂತ್ರ ಕೊಡುವ ಬಗ್ಗೆ ತಾವು ಏನು ಹೇಳಿದ್ದೀರಿ ಅದಕ್ಕೆ ನಾನು ಯಾವತ್ತೂ ತಕರಾರು ಮಾಡಿದವನು ಅಲ್ಲ; ಬಹಳ ಒಳ್ಳೆಯ ಕಾರ್ಯಕ್ರಮ ಮಾಡಿ ಎಲ್ಲೋ ಒಂದು ಕಡೆ ಸಿಕ್ಕಿಹಾಕಿಕೊಳ್ಳುವುದು ಬೇಡ, ಗಣಕಯಂತ್ರ ತಾವು ಕೊಡುತ್ತೀರಿ ಎಂದು ಹೇಳಿದಿರಿ, ಗಣಕಯಂತ್ರಕ್ಕೆ ಇನ್‌ಮೆಸ್ಟ್ ಮಾಡುವ ದುಡ್ಡು ನಮಗೆ ಕೊಡಿ, ನಾವು ಬೇಕಾದರೆ ಹೆಚ್ಚಿಗೆ ದುಡ್ಡು ಹಾಕಿ ಬೇರೆ ಗಣಕ ಯಂತ್ರಗಳನ್ನು ಕೊಳ್ಳುತ್ತೇವೆ. ಯಾವುದೋ ಒಂದು ಗಣಕಯಂತ್ರ ಕೊಟ್ಟರೆ ಹೇಗೆ? ಮಾರುಕಟ್ಟೆಯಲ್ಲಿ ಅನೇಕ ಗಣಕಯಂತ್ರಗಳಿವೆ.

ಅಧ್ಯಕ್ಷರು :— ತಮ್ಮ ಅಹವಾಲನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಡುತ್ತೇವೆ.

ಶ್ರೀ ಬಿ.ಬಿ. ಶಿವಪ್ಪ :— ನನ್ನ ಅಹವಾಲನ್ನು ನೀವು ತೆಗೆದುಕೊಳ್ಳುತ್ತಲೇ ಇಲ್ಲ, ಇನ್ನು ಮುಖ್ಯಮಂತ್ರಿಗಳ ಹತ್ತಿರ ಏನು ಮಾತನಾಡುತ್ತೀರಿ?

ಅಧ್ಯಕ್ಷರು :— ಇದು ಫೈನಾನ್ಸ್ ಮಿನಿಸ್ಟರ್‌ರವರಿಂದ ಬಂದಿರುವುದು, ನಾನೇನು ಮಾಡಲಿ?

ಶ್ರೀ ಬಿ.ಎನ್. ಬಚ್ಚೇಗೌಡ :— ಇದು ಸದನದಲ್ಲಿ ತಮ್ಮಿಂದ ತೀರ್ಮಾನವಾಗಬೇಕು.

ಅಧ್ಯಕ್ಷರು :— ಪಾರ್ಲಿಮೆಂಟಿನಲ್ಲಿ ಆ ರೀತಿ ಇದೆ.

ಶ್ರೀ ಯು.ಆರ್. ಸಭಾಪತಿ :— ನಾನು ಬೇರೆ ಏನೂ ಹೇಳುವುದಿಲ್ಲ, ದಯವಿಟ್ಟು ಈ ಆದೇಶ ವಾಪಸ್ ತೆಗೆದುಕೊಳ್ಳಿ.

ಅಧ್ಯಕ್ಷರು :— ಅದು ನನ್ನ ಸೃಷ್ಟಿ ಅಲ್ಲ, ಫೈನಾನ್ಸ್ ಮಿನಿಸ್ಟರ್‌ರವರಿಂದ ಬಂದಿರುವುದು, ಅದನ್ನು ನಿಮಗೆ ಕಳುಹಿಸಿದ್ದೇವೆ ಅಷ್ಟೆ.

ಶ್ರೀ ಯು.ಆರ್. ಸಭಾಪತಿ :— ಫೈನಾನ್ಸ್ ಸೆಕ್ರೆಟರಿಯವರು ಅವರದೇ ಆದ ನಿಲುವನ್ನು ತಾಳಿರುತ್ತಾರೆ. ನಮ್ಮ ನಿಲುವು ಏನಿದೆ ಅದನ್ನು ಅವರಿಗೆ ಹೇಳಬೇಕೇ ವಿನಃ ಅವರ ನಿಲುವನ್ನು ನಾವು ಕೇಳುವುದು ಅಲ್ಲ.

ಅಧ್ಯಕ್ಷರು :— ಹಣಕಾಸು ಸಚಿವರ ಹತ್ತಿರ ಮಾತನಾಡಿ ತಮಗೆ ಅನುಕೂಲವಾಗುವ ಹಾಗೆ ಮಾಡಿಕೊಡುತ್ತೇವೆ.

ಶ್ರೀ ಕೆ. ಶ್ರೀನಿವಾಸಗೌಡ ಕುದಮನಹಳ್ಳಿ :— ಪ್ರತಿ ಎರಡು ತಿಂಗಳಿಗೆ ಒಂದು ಸಾರಿ ಅದರಲ್ಲಿ ಹೊಸ ಹೊಸ ವಿಧಾನಗಳು ಬರುತ್ತಿವೆ. ನಾಲ್ಕು ವರ್ಷಗಳಲ್ಲಿ ಅದನ್ನು ವಾಪಸ್ ಕೊಡಬೇಕೆಂದು ಕಂಡಿಷನ್ ಹಾಕಿದರೆ ನಮಗೆ ಏಕೆ ಕೊಡಬೇಕು? ನಾವು ಏನು ಹೇಳುತ್ತೇವೋ ಅದನ್ನು ಕೊಂಡು ನಮಗೆ ಕೊಡಿ, ಹಣ ಬೇಡ,

(iv) ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಬಿಜಾಪುರ ತಾಲ್ಲೂಕು ಚಿಕ್ಕಗಲಗಲಿ ಗ್ರಾಮ ಮುಳುಗಡೆಹೊಂದಿರುವ ವಿಚಾರ.

ಶ್ರೀ ಸಂಗಣ್ಣ ಕೆ. ಬೆಳ್ಳುಬ್ಬಿ (ಬಸವನ ಬಾಗೇವಾಡಿ) :— ಮಾನ್ಯ ಅಧ್ಯಕ್ಷರೆ, ಬಿಜಾಪುರ ತಾಲ್ಲೂಕು ಚಿಕ್ಕಗಲಗಲಿ ಗ್ರಾಮ ಈ ವರ್ಷ ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ 515.9 ಆಡಿ ನೀರು ಬಂದಾಗ ಆ ಗ್ರಾಮದ ಹತ್ತಿರ ನೀರು ಬಂದು ಆ ಗ್ರಾಮದ ಕೆಲವು ಭಾಗಗಳು ಮುಳಗಡೆಯಾಗಿದ್ದು, ಆ ಗ್ರಾಮದ ಜನತೆಗೆ ಇನ್ನೂ ಪರಿಹಾರ ಸಿಕ್ಕಿಲ್ಲ. ಮಾನ್ಯ ಭಾರೀ ನೀರಾವರಿ ಮಂತ್ರಿಗಳು ಚಿಕ್ಕ ಗಲಗಲಿ ಗ್ರಾಮದ ಎಲ್ಲ ಮನೆಗಳನ್ನು ಸ್ವಾಧೀನಪಡಿಸಿಕೊಂಡು ಎಲ್ಲ ಗ್ರಾಮಗಳಂತೆ ಆ ಗ್ರಾಮಕ್ಕೂ ಬೇಗನೆ ಪರಿಹಾರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(v) ಮೈಸೂರಿನ ಅಶೋಕಪುರಂ ಮೊಹಲ್ಲಾದಲ್ಲಿ ಅಕ್ರಮವಾಗಿ ಹೆಂಡ ಮಾಡುತ್ತಿರುವುದು.

ಶ್ರೀ ಎ. ರಾಮದಾಸ್ (ಕೃಷ್ಣರಾಜ) :— ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ಎಸ್‌ಟಿ ವರ್ಗದ ಜನರು 25 ಸಾವಿರಕ್ಕಿಂತಲೂ ಹೆಚ್ಚು ಸಂಖ್ಯೆಯಲ್ಲಿರುವ ಬಡಾವಣೆ ಎಂದರೆ ಅದು ಮೈಸೂರಿನ ಅಶೋಕಪುರಂ ಮೊಹಲ್ಲಾ ಈ ಪ್ರದೇಶದಲ್ಲಿ ಕಳೆದ ಒಂದು ವರ್ಷದಿಂದ ಅಕ್ರಮ ರೀತಿಯಲ್ಲಿ ಹೆಂಡವನ್ನು ಮಾರುವಂಥ ವ್ಯವಸ್ಥೆ ನಡೆಯುತ್ತಿರುವುದು ಎಲ್ಲಾ ಕಡೆಗಳಲ್ಲಿ ವರದಿಯಾಗಿದೆ. ಆ ಕುರಿತು ಸರಕಾರಕ್ಕೆ ದೂರುಗಳು ಬಂದರೂ ಕೂಡ ಸರಕಾರದವರು ಯಾವ ಕ್ರಮಗಳನ್ನೂ ತೆಗೆದುಕೊಂಡಿಲ್ಲ. ಒಂದು ವರ್ಷದಿಂದ ಜನರು